RNU AIR DHARWAD

JULY 29, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

1. ಹಣಕಾಸು ಸೇರ್ಪಡೆ, ಪರಿಪೂರ್ಣತೆ ಅಭಿಯಾನದ ಅಂಗವಾಗಿ, ವಿಜಯಪುರ ಜಿಲ್ಲೆ, ಕೊಣ್ಣೂರು ಗ್ರಾಮದಲ್ಲಿ, ಡಿಜಿಟಲ್ ಬ್ಯಾಂಕಿಂಗ್, ಸೈಬರ್ ಸುರಕ್ಷತೆ ಹಾಗೂ ಸಾಮಾಜಿಕ ಸುರಕ್ಷತಾ ಯೋಜನೆಗಳ ಕುರಿತು, ಜನ ಜಾಗ್ರತಿ ಕಾರ್ಯ ನಡೆಯಿತು.

<><><>

2. ಪ್ರಧಾನಮಂತ್ರಿ ಸೂರ್ಯ ಘರ್, ಮುಫ್ತ್ ಬಿಜಲಿ ಯೋಜನೆ ಅಡಿ, ವಿಜಯನಗರ ಜಿಲ್ಲೆಯ ಹಲವು ಫಲಾನುಭವಿಗಳು, ಸೌರ ವಿದ್ಯುತ್‌ಅನ್ನು, ಗ್ರಿಡ್‌ಗಳಿಗೆ ರವಾನಿಸಿ, ಆದಾಯ ಪಡೆಯುತ್ತಿದ್ದಾರೆ. ಈ ಕುರಿತು ಯೋಜನೆಯ ಫಲಾನುಭವಿ, ಹೊಸಪೇಟೆಯ ಅಯ್ಯಣ್ಣ ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನುಭವ ಹಂಚಿಕೊಂಡಿದ್ದಾರೆ.

<><><>

ಅಯ್ಯಣ್ಣ ಧ್ವನಿ 24 ಸೆಕೆಂದುಗಳು

<><><>

3. ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದಿನಿಂದ ಆಗಸ್ಟ್ 1ನೇ ತಾರೀಖಿನ ವರೆಗೆ, ನಾಲ್ಕು ದಿನಗಳ ಕಾಲ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರ ಸಭೆ ನಡೆಸಲಿದ್ದಾರೆ. ಮೊದಲ ದಿನದ ಸಭೆ, ಇಂದು ಸಂಜೆ 4 ಗಂಟೆಗೆ, ವಿಧಾನಸೌಧದಲ್ಲಿ ಜರುಗಲಿದೆ. ಮೈಸೂರು, ಚಾಮರಾಜನಗರ, ತುಮಕೂರು, ಕೊಡಗು, ಹಾಸನ ಹಾಗೂ ದಕ್ಷಿಣಕನ್ನಡ ಜಿಲ್ಲೆಗಳ, ಸಚಿವರು, ಶಾಸಕರೊಂದಿಗೆ, ಮುಖ್ಯಮಂತ್ರಿಯವರು ಸಭೆ ನಡೆಸಿ, ಅಹವಾಲು ಆಲಿಸಲಿದ್ದಾರೆ.

<><><>

4. ಕಲಬುರಗಿ, ಶರಣಬಸವೇಶ್ವರ ಸಂಸ್ಥಾನದ, 8ನೇ ಪೀಠಾಧಿಪತಿ, ಶ್ರೀ ಶರಣಬಸಪ್ಪ ಅಪ್ಪ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ. 91 ವರ್ಷದ ಅಪ್ಪ ಅವರನ್ನು, ಶ್ವಾಸಕೋಶದ ಸೋಂಕಿನ ಚಿಕಿತ್ಸೆಗಾಗಿ, ಎರಡು ದಿನಗಳ ಹಿಂದೆ, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು, ಮಹಾದಾಸೋಹ ಪೀಠ ತಿಳಿಸಿದೆ.

<><><>

5. ಅಟಲ್‌ಜೀ ಜನಸ್ನೇಹಿ ಕೇಂದ್ರದ ಮೂಲಕ, ಕಳೆದ ಜೂನ್ ತಿಂಗಳಿನಲ್ಲಿ, 49 ಸಾವಿರದ 581 ಅರ್ಜಿಗಳನ್ನು, ನಿಗದಿತ ಅವಧಿಗಿಂತ ಮೊದಲೇ ವಿಲೇವಾರಿ ಮಾಡಿದ, ಕಲಬುರಗಿ ಜಿಲ್ಲೆ, ರಾಜ್ಯಕ್ಕೆ 3ನೇ ಸ್ಥಾನ ಪಡೆದಿದೆ. ಕಂದಾಯ ಆಯುಕ್ತ ಪಿ.ಸುನೀಲಕುಮಾರ, ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರಿಗೆ, ಪ್ರಶಂಸಾ ಪತ್ರ ಕಳುಹಿಸಿದ್ದಾರೆ.

<><><>

6. ರಾಷ್ಟ್ರೀಯ ಶಿಕ್ಷಣ ನೀತಿ, ಎನ್.ಇ.ಪಿ. 2020 ಜಾರಿಗೊಂಡು, ಇಂದಿಗೆ 5 ವರ್ಷಗಳನ್ನು ಪೂರ್ಣಗೊಳಿಸಿದೆ. ಕಳೆದ 5 ವರ್ಷಗಳಲ್ಲಿ ಎನ್.ಇ.ಪಿ., ಭಾರತದಲ್ಲಿ ಹೆಚ್ಚು ಅಂತರ್ಗತ, ಕಲಿಕೆ ಕೇಂದ್ರಿತ ಮತ್ತು ಭವಿಷ್ಯಕ್ಕೆ ಯುವಜನತೆಯನ್ನು ಅಣಿಗೊಳಿಸುವ, ಶಿಕ್ಷಣ ವ್ಯವಸ್ಥೆಗೆ ಅಡಿಪಾಯ ಹಾಕಿದೆ.

<><><>

7. ನಾಗರಪಂಚಮಿ, ಕನ್ನಡ ಜಾನಪದದಲ್ಲಿ ಬಣ್ಣಿಸಿರುವ, ಅನನ್ಯ ಹಬ್ಬ; ಉತ್ತರ ಕರ್ನಾಟಕದಲ್ಲಿ ರೊಟ್ಟಿ ಪಂಚಮಿ, ಜೋಕಾಲಿ ಹಬ್ಬ ಎಂದೆಲ್ಲಾ, ವಿಶಿಷ್ಟವಾಗಿ ಆಚರಿಸುತ್ತಾರೆ ಎಂದು, ಕೈಗಾರಿಕೆಗಳ ಖಾತೆ ಸಚಿವ, ಎಂ.ಬಿ.ಪಾಟೀಲ, ಶುಭಾಶಯ ಸಂದೇಶದಲ್ಲಿ, ತಿಳಿಸಿದ್ದಾರೆ.

8. ಸಹೋದರ, ಸಹೋದರಿಯರ ಬಾಂಧವ್ಯ, ನಾಗಪ್ಪನ ಆರಾಧನೆ, ಜಾನಪದ ಸೊಗಡು ಈ ಹಬ್ಬದಲ್ಲಿ ಮೇಳೈಸಿದೆ. ನಾಡಿನ ಜನತೆಗೆ ನಾಗರ ಪಂಚಮಿ ಹಬ್ಬದ ಹಾರ್ದಿಕ ಶುಭಾಶಯ, ಎಂದು ಅನೇಕ ಗಣ್ಯರು ಹಾರೈಸಿದ್ದಾರೆ.

<><><>

9. ನಾಡಿಗೆ ದೊಡ್ಡದು, ನಾಗರ ಪಂಚಮಿ. ಇಂದು, ಸಂಭ್ರಮ, ಸಡಗರ ಹಾಗೂ ಶ್ರದ್ಧಾ, ಭಕ್ತಿಯಿಂದ, ನಾಗಪ್ಪನ ಪೂಜೆ, ನಾಗಬನಗಳಲ್ಲಿ ವಿಶೇಷ ಪೂಜೆ, ಹಾಲೆರೆಯುವ, ಜೋಕಾಲಿ ಜೀಕುವ, ಉಂಡಿ, ಚಕ್ಕುಲಿ ಸೇರಿದಂತೆ, ವಿಶಿಷ್ಟ ಖಾದ್ಯಗಳನ್ನು ಹಂಚಿ, ಸಹಭೋಜನ ಮಾಡುವಲ್ಲಿ, ವಿಶೇಷವಾಗಿ ಹೆಣ್ಣು ಮಕ್ಕಳು ನಿರತರಾಗಿದ್ದಾರೆ. ಶ್ರಾವಣ ಮಾಸದ ನಾಗರ ಪಂಚಮಿಯನ್ನು, ಕೆಲವೆಡೆ ನಿನ್ನೆ ಹಾಗೂ ಹಲವೆಡೆ ಇಂದು, ಆಚರಿಸಲಾಗುತ್ತಿದೆ.

<><><>

10. ಧಾರವಾಡದ ಮಾಳಮಡ್ಡಿಯ, ಕೆ.ಇ.ಬೋರ್ಡ್ಸ್ ಪ್ರಾಥಮಿಕ ಶಾಲೆಯಲ್ಲಿ, ದೈಹಿಕ ಶಿಕ್ಷಣ ಶಿಕ್ಷಕ, ಕೆ.ಡಿ. ಈರಣ್ಣವರ ಸಿದ್ಧಪಡಿಸಿದ್ದ, ಆರಡಿ ಎತ್ತರದ ಮಣ್ಣಿನ ನಾಗಪ್ಪನ ವಿಗ್ರಹಕ್ಕೆ, ಶಿಕ್ಷಕಿಯರು ಹಾಗೂ ವಿದ್ಯಾರ್ಥಿನಿಯರು, ಹಾಲೆರೆದು ಸಂಭ್ರಮದ ನಾಗರ ಪಂಚಮಿ ಆಚರಿಸಿದರು.

<><><>

11. ಇಂದು, ವಿಶ್ವ ಹುಲಿ ದಿನ. 'ಹುಲಿಗಳಿಗಾಗಿ ಧ್ವನಿ ಎತ್ತೋಣ; ಹುಲಿಗಳು, ಅರಣ್ಯ ಹಾಗೂ ಜೀವಗಳನ್ನು ರಕ್ಷಿಸೋಣ' ಎಂಬ, ಧ್ಯೇಯದೊಂದಿಗೆ, ಆಚರಿಸಲಾಗುತ್ತಿದೆ.

<><><>

ಅರಣ್ಯ ಖಾತೆ ಸಚಿವ, ಈಶ್ವರ ಖಂಡ್ರೆ, ಹುಲಿ ನಮ್ಮ ನೈಸರ್ಗಿಕ ಪರಂಪರೆಯ ಹೆಮ್ಮೆ, ಪರಿಸರ ಸಮತೋಲನ ಕಾಯುವ, ಪ್ರಮುಖ ಕೊಂಡಿ, ಎಂದು ತಿಳಿಸಿದ್ದಾರೆ.

<><><>

ಭಾರತದಲ್ಲಿ, ಕರ್ನಾಟಕ ರಾಜ್ಯ, ಅತೀ ಹೆಚ್ಚು ಹುಲಿಗಳನ್ನು ಹೊಂದಿದ, ಎರಡನೇ ರಾಜ್ಯವಾಗಿದೆ. 'ಹುಲಿಗಳನ್ನು ರಕ್ಷಿಸಿ, ಅರಣ್ಯ ವ್ಯವಸ್ಥೆಯ ಸಮತೋಲನ, ಜಲಚಕ್ರದ ಸ್ಥಿರತೆ ಮತ್ತು ಭವಿಷ್ಯದ ತಲೆಮಾರಿಗೆ, ಆರೋಗ್ಯಕರ ಪರಿಸರವನ್ನು ಖಾತ್ರಿ ಪಡಿಸೋಣ' ಎಂದು, ಅವರು ಆಶಿಸಿದ್ದಾರೆ.

<><><>

12. ಸತತ ಮಳೆ ಹಿನ್ನೆಲೆ, ದಾವಣಗೆರೆ ಜಿಲ್ಲೆ, ತುಂಗಭದ್ರಾ ನದಿ ಪಾತ್ರದಲ್ಲಿ, ಪ್ರವಾಹ ಭೀತಿ ಉಂಟಾಗಿದೆ. ಹೊನ್ನಾಳಿಯಲ್ಲಿ ಕಾಳಜಿ ಕೇಂದ್ರ ತೆರೆಯಲಾಗಿದೆ. ಹರಿಹರದ ಗಂಗಾನಗರ ಹಾಗೂ ನ್ಯಾಮತಿ ತಾಲೂಕಿನ ಚೀಲೂರು ಗ್ರಾಮದಲ್ಲಿ, ಕಾಳಜಿ ಕೇಂದ್ರ ತೆರೆಯಲಾಗುವುದು ಎಂದು, ಜಿಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ತಿಳಿಸಿದ್ದಾರೆ. ಬಾಲರಾಜಘಾಟ್‌ನ 8 ಕುಟುಂಬಗಳ 33 ಜನರನ್ನು ಸುರಕ್ಷಿತವಾಗಿ, ಸ್ಥಳಾಂತರಿಸಲಾಗಿದೆ.

<><><>

13. ಉತ್ತರಕನ್ನಡ ಜಿಲ್ಲೆ, ಹೊನ್ನಾವರ ತಾಲೂಕು, ಕಲಬಾಗ್ ಮೂಲದ, ಖ್ಯಾತ ಹಿಂದೂಸ್ಥಾನಿ ಗಾಯಕ, ಪಂಡಿತ ಪರಮೇಶ್ವರ ಹೆಗಡೆ ಅವರು, ಆಕಾಶವಾಣಿ ಮತ್ತು ದೂರದರ್ಶನದ, ಎ ಟಾಪ್, ಅತ್ಯುಚ್ಛ ಶ್ರೇಣಿ, ಶ್ರೇಷ್ಠ ಕಲಾವಿದರಾಗಿ ಆಯ್ಕೆಯಾಗಿದ್ದಾರೆ. ಪಂಡಿತ ಎಸ್.ಎಂ. ಭಟ್ಟ ಕಟ್ಟಿಗೆ, ಪಂಡಿತ ಚಂದ್ರಶೇಖರ ಪುರಾಣಿಕಮಠ ಹಾಗೂ ಪಂಡಿತ ಬಸವರಾಜ ರಾಜಗುರು ಅವರಲ್ಲಿ, ಸಂಗೀತಾಭ್ಯಾಸ ಕೈಗೊಂಡಿದ್ದಾರೆ. ಖ್ಯಾತ, ಹಿಂದೂಸ್ಥಾನಿ ಪಿಟೀಲು ವಾದಕರಾದ, ವಿದುಷಿ ಅಕ್ಕಮಹಾದೇವಿ ಹಿರೇಮಠ ಹಾಗೂ ಪಂಡಿತ ಬಿ.ಎಸ್. ಮಠ, ಸೇರಿದಂತೆ, ಸಂಗೀತ ಕ್ಷೇತ್ರದ ಗಣ್ಯರು ಶುಭ ಹಾರೈಸಿದ್ದಾರೆ.

<><><>

14. ವಾಯುಭಾರ ಕುಸಿತದ ಹಿನ್ನೆಲೆ, ಇಂದಿನಿಂದ ಮೂರು ದಿನಗಳ ಕಾಲ, ರಾಜ್ಯದ ಕರಾವಳಿ, ಉತ್ತರ ಹಾಗೂ ದಕ್ಷಿಣ ಒಳನಾಡಿನಲ್ಲಿ ಮಳೆಯಾಗುವ ಸಾಧ್ಯತೆ ಇದೆ. ಹವಾಮಾನ ಇಲಾಖೆ, ಯೆಲ್ಲೋ ಅಲರ್ಟ್ ಘೋಷಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.